**ಓ.ಎಸ್. ನಂಃ 270/2020**

**ಪಿ.ಡಬ್ಲ್ಯೂಃ 2**

**ದಿನಾಂಕ 05.08.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಕೆ.ವಿ.ಯು.ವಕೀಲರಿಂದಃ**

1. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ನಾನು ಟಿ.ನರಸೀಪುರ ತಾಲೂಕಿನ ಕೊಣಗಳ್ಳಿಯಲ್ಲಿ ವಾಸವಿದ್ದೇನೆ. ವಾದಿಯರ ತಂದೆಯಾದ 1 ನೇ ಪ್ರತಿವಾದಿ ಇವರು ನನ್ನ ಅಣ್ಣನಾಗಿದ್ದು, ವಾದಿಯರು ನನ್ನ ಅಣ್ಣನ ಮಕ್ಕಳಾಗಿರುತ್ತಾರೆ. ವಾದಿಯರು ಈ ದಾವೆಯನ್ನು 1 ನೇ ಪ್ರತಿವಾದಿಯ ವಿರುದ್ಧ ಹೂಡಿರುತ್ತಾರೆ. ಯಾವ ಉದ್ದೇಶಕ್ಕಾಗಿ ವಾದಿಯರು ಈ ದಾವೆಯನ್ನು ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ನನ್ನ ತಂದೆಯ ಹೆಸರು ರಾಮಪ್ಪ ಅಂತ ಇದ್ದು, ನನ್ನ ತಂದೆಗೆ ಒಟ್ಟು 6 ಜನ ಮಕ್ಕಳು. 1 ನೇ ಪ್ರತಿವಾದಿ ಮತ್ತು ನಾನು ನನ್ನ ತಂದೆಯ ಇಬ್ಬರು ಗಂಡು ಮಕ್ಕಳು ಆಗಿದ್ದು, ಉಳಿದ 4 ಜನರು ಹೆಣ್ಣು ಮಕ್ಕಳಿರುತ್ತಾರೆ. ಅವರ ಹೆಸರು ಮಹಾದೇವಮ್ಮ, ನಾಗಮ್ಮ, ಮರಿಯಮ್ಮ ಮತ್ತು ಗಿರಿಜಮ್ಮ ಅಂತ ಇರುತ್ತದೆ. ನನ್ನ ಸಹೋದರನಾದ 1 ನೇ ಪ್ರತಿವಾದಿಗೆ ಒಟ್ಟು 5 ಜನ ಮಕ್ಕಳಿರುತ್ತಾರೆ. ಅವರ ಹೆಸರು 3 ನೇ ಪ್ರತಿವಾದಿಯಾದ ಮಹಾದೇವಮ್ಮ ಅಲಿಯಾಸ್ ಬೇಬಿ, ವಾದಿಯರಾದ ರಾಜೇಶ ಹಾಗೂ ಉಮೇಶ, 4 ನೇ ಪ್ರತಿವಾದಿಯಾದ ರೇಖಾ, 5 ನೇ ಪ್ರತಿವಾದಿಯಾದ ಸರಸ್ವತಿ ಅಂತ ಇರುತ್ತದೆ.

3. ದಾವಾ ಆಸ್ತಿಯ ಹಂಪಾಪುರದಲ್ಲಿದೆ. ದಾವಾ ಆಸ್ತಿಯು ಮನೆ ಮತ್ತು ಖಾಲಿ ನಿವೇಶನವಾಗಿರುತ್ತದೆ. ದಾವಾ ಆಸ್ತಿಯು ಕ್ರಯದ ಮೂಲಕ 1 ನೇ ಪ್ರತಿವಾದಿಗೆ ಬಂದಿರುತ್ತದೆ. ದಾವಾ ಆಸ್ತಿಯನ್ನು ಖರೀದಿಸಲು 1 ನೇ ಪ್ರತಿವಾದಿಯು 1993 ರಲ್ಲಿ ನನ್ನಿಂದ 10,000/- ರೂಪಾಯಿ ಪಡೆದಿರುತ್ತಾರೆ. ದಾವಾ ಆಸ್ತಿಯನ್ನು ಖರೀದಿಸುವಾಗ ನನ್ನ ತಂದೆಯವರು ಸಹ ಜೀವಂತವಿದ್ದರು. ನನ್ನಿಂದ ಹಣ ಪಡೆದು

1 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ಖರೀದಿಸಿರುತ್ತಾರೆ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯು ಯಾರಿಂದ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

4. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನನಗೆ ಮತ್ತು 1 ನೇ ಪ್ರತಿವಾದಿಗೆ ಪಿತ್ರಾರ್ಜಿತವಾಗಿ ಯಾವೆಲ್ಲಾ ಆಸ್ತಿಗಳು ಬಂದಿವೆ ಎಂದು ನನಗೆ ಈಗ ನೆನಪಿಲ್ಲ. 1 ನೇ ಪ್ರತಿವಾದಿ ತನ್ನ ಆಸ್ತಿಗಳನ್ನು ಹಕ್ಕು ಖುಲಾಸೆ ಮಾಡಿಕೊಟ್ಟ ಬಳಿಕ ಅವರ ಹೆಸರಿಗೆ ಯಾವುದೇ ಆಸ್ತಿಗಳಿಲ್ಲ. 1995 ರ ಫೆಬ್ರುವರಿ ತಿಂಗಳಲ್ಲಿ 1 ನೇ ಪ್ರತಿವಾದಿ ನನಗೆ ಹಕ್ಕು ಖುಲಾಸೆ ಪತ್ರವನ್ನು ಬರೆದು ಕೊಟ್ಟಿರುತ್ತಾರೆ. ತಮಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳನ್ನು 1 ನೇ ಪ್ರತಿವಾದಿ ನನಗೆ ಹಕ್ಕು ಖುಲಾಸೆ ಮಾಡಿಕೊಟ್ಟಿರುತ್ತಾರೆ. ಪ್ರತಿವಾದಿ ಸಂಖ್ಯೆ 1 ಮತ್ತು 2 ರವರು ನ್ಯಾಯಾಲಯಕ್ಕೆ ಬರದ ಹಾಗೆ ಪ್ರತಿವಾದಿ ಸಂಖ್ಯೆ 4 ಮತ್ತು 5 ರವರ ವಾರಸುದಾರರು ಅಡ್ಡಿ ಪಡಿಸುತ್ತಿದ್ದಾರೆ ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಪ್ರತಿವಾದಿ ಸಂಖ್ಯೆ 1 ಮತ್ತು 2 ರವರು ನ್ಯಾಯಾಲಯಕ್ಕೆ ಬರದ ಹಾಗೆ ವಾದಿಯರೇ ಅಡ್ಡಿ ಪಡಿಸುತ್ತಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

5. ಪ್ರಸ್ತುತ ದಾವಾ ಆಸ್ತಿಯ ಖಾತೆಯು ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯು ತನ್ನ ಸ್ವಂತ ಆದಾಯದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುವ ಕಾರಣ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ದಾನವಾಗಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.

6. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ 2 ನೇ ಹೆಂಡತಿಯಾಗಿರುತ್ತಾರೆ. 1 ನೇ ಪ್ರತಿವಾದಿಯು ತಮಗೆ ವಯಸ್ಸಾದ ಬಳಿಕ ತಮ್ಮನ್ನು ನೋಡಿಕೊಳ್ಳುವ ಉದ್ದೇಶದಿಂದ 2 ನೇ ಪ್ರತಿವಾದಿಯನ್ನು ವಿವಾಹವಾಗಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಯು 2 ನೇ ಪ್ರತಿವಾದಿಗೆ ದಾನವಾಗಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಂತರದಲ್ಲಿ 2 ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ತಮ್ಮ

ಮಕ್ಕಳಾದ 4 ಮತ್ತು 5 ನೇ ಪ್ರತಿವಾದಿಯರಿಗೆ ದಾನವಾಗಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 4 ಮತ್ತು 5 ನೇ ಪ್ರತಿವಾದಿಯರ ಮರಣದ ನಂತರ ಅವರ ವಾರಸುದಾರರು ದಾವಾ ಆಸ್ತಿ ಯ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಯರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ಹೇಳಿ ಕೊಟ್ಟ ಹಾಗೇ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**